### 6. ಕೇಂದ್ರ–ಪಶ್ಚಿಮ ಬಂಗಾಳ ಜಟಾಪಟಿ

ಪಶ್ಚಿಮ ಬಂಗಾಳದಲ್ಲಿ ಲಾಕ್‌ಡೌನ್ ಹಾಗೂ ಕೊರೊನಾ ಮಹಾಮಾರಿಯ ಸ್ಥಿತಿಗತಿಯ ಅಧ್ಯಯನ ನಡೆಸಲು ಕೇಂದ್ರ ಸರ್ಕಾರವು ಅಂತರ ಸಚಿವಾಲಯದ ತಂಡಗಳನ್ನು ಕಳುಹಿಸಿರುವುದು ರಾಜ್ಯ ಮತ್ತು ಕೇಂದ್ರದ ನಡುವೆ ಸಂಘರ್ಷಕ್ಕೆ ಕಾರಣವಾಗಿದೆ.

ಕೇಂದ್ರವು ಪಶ್ಚಿಮ ಬಂಗಾಳಕ್ಕೆ ಎರಡು ತಂಡಗಳನ್ನು ಕಳುಹಿಸಿದೆ. ರಕ್ಷಣಾ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ  ಹಾಗೂ ಒಂದು ತಂಡದ ನಾಯಕರಾಗಿರುವ ಅಪೂರ್ವ ಚಂದ್ರ ಅವರು ರಾಜ್ಯ ಸರ್ಕಾರವು ನಮಗೆ ಸಂಪೂರ್ಣ ಸಹಕಾರ ನೀಡುತ್ತಿಲ್ಲ ಎಂದಿದ್ದಾರೆ.

ನಾವು ಮುಖ್ಯ ಕಾರ್ಯದರ್ಶಿ ರಾಜೀವ್ ಸಿನ್ಹಾ ಅವರನ್ನು ಭೇಟಿ ಮಾಡಿ, ರಾಜ್ಯದ ಅಧಿಕಾರಿಗಳು ಜೊತೆಗಿದ್ದರೆ ಮಾತ್ರ ನಮ್ಮ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡಲು ಸಾಧ್ಯ ಎಂದು ಮನವರಿಕೆ ಮಾಡಿಕೊಟ್ಟಿದ್ದೆವು. ಆದರೆ, ಅವರಿಂದ ಸಹಕಾರ ಲಭಿಸಿಲ್ಲ. ಮುಖ್ಯ ಕಾರ್ಯದರ್ಶಿ ನಮ್ಮನ್ನು ಪುನ: ಭೇಟಿ ಮಾಡುವ ನಿರೀಕ್ಷೆ ಇದೆ. ಅವರ ಜೊತೆ ಇನ್ನೊಂದು ಸಭೆ ನಡೆಸುತ್ತೇವೆ ಎಂದು ಅವರು ಮಾಧ್ಯಮದವರ ಜೊತೆ ಮಾತನಾಡುತ್ತಾ ತಿಳಿಸಿದರು.

ಪಶ್ಚಿಮ ಬಂಗಾಳ ಮಾತ್ರವಲ್ಲ ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ ಮುಂತಾದ ರಾಜ್ಯಗಳಿಗೂ ಇಂಥ ತಂಡಗಳು ಹೋಗಿವೆ. ಆ ರಾಜ್ಯಗಳಲ್ಲಿ ನಮಗೆ ಸರ್ಕಾರದ ಬೆಂಬಲ ಲಭಿಸಿದೆ. ಪಶ್ಚಿಮ ಬಂಗಾಳಕ್ಕೆ ನೀಡಿದ್ದಂಥ ನೋಟಿಸ್ ಅನ್ನೇ ಆ ರಾಜ್ಯಗಳಿಗೂ ನೀಡಲಾಗಿದೆ. ಅಲ್ಲಿ ಯಾವುದೇ ಸಮಸ್ಯೆ ಬಂದಿಲ್ಲ ಎಂದರು.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಮುಖ್ಯ ಕಾರ್ಯದರ್ಶಿ ಸಿನ್ಹಾ , ರಾಜ್ಯಕ್ಕೆ ತಂಡಗಳನ್ನು ಕಳುಹಿಸುವುದಕ್ಕೂ ಮುನ್ನ ಕೇಂದ್ರ ಸರ್ಕಾರವು ರಾಜ್ಯದ ಜೊತೆಗೆ ಮಾತುಕತೆ ನಡೆಸಬೇಕಾಗಿತ್ತು ಎಂಬುದು ನಮ್ಮ ನಿಲುವು. ರಾಜ್ಯದ ಸ್ಥಿತಿಗತಿಯ ಎಲ್ಲಾ ಮಾಹಿತಿಯನ್ನು ಇನ್ನೊಂದು ತಂಡದ ಮುಖ್ಯಸ್ಥರಾದ ವಿನೀತ್ ಜೋಶಿ ಅವರಿಗೆ ಈಗಾಗಲೇ ಸಲ್ಲಿಸಿದ್ದೇವೆ.

ಯಾವುದಾದರೂ ಸ್ಥಳಕ್ಕೆ ತಂಡದವರು ಭೇಟಿ ನೀಡಲು ಇಚ್ಛಿಸುವುದಾದರೆ ಅವರನ್ನು ಕರೆದೊಯ್ಯಲು ಸಿದ್ಧ. ಕೇಂದ್ರ–ರಾಜ್ಯ ಸರ್ಕಾರಗಳ ಮಧ್ಯೆ ಯಾವುದೇ ಸಂಘರ್ಷವಿಲ್ಲ. ಈ ವಿಚಾರದಲ್ಲಿ ರಾಜ್ಯ ಸರ್ಕಾರವನ್ನಷ್ಟೇ ದೂಷಿಸುವುದು ಸರಿಯಲ್ಲ. ಎರಡೂ ಕಡೆಗಳಿಂದ ಶಿಸ್ತಿನ ಪ್ರದರ್ಶನವಾಗಬೇಕು ಎಂದರು. ಈ ಗೊಂದಲಗಳ ನಡುವೆಯೂ ತಂಡವು ರಾಜ್ಯದ ಕೆಲವು ಪ್ರದೇಶಗಳಲ್ಲಿ ಪರಿಶೀಲನೆ ನಡೆಸಿದೆ.

ಆಧಾರ:ಪ್ರಜಾವಾಣಿ, ದಿನಾಂಕ:22.04.2020